

# ನಮ್ಮ ಜ್ಞಾನ ವಿಜ್ಞಾನವಾಗಬೇಕೆ?

**ಇತಿಹಾಸದ ಹಾದಿಯಲ್ಲಿ ವಿಜ್ಞಾನ ತಾನೂ ಬೆಳೆಯುತ್ತಾ, ಮನುಕುಲದ ನಾಗರಿಕತೆಯನ್ನು ಬೆಳೆಸಿದೆ. ಮಾತ್ರವಲ್ಲ ವಿಜ್ಞಾನ ಮನುಷ್ಯನ ಅಂತರಂಗ ಬೆಳಗುವುದರ ಜೊತೆಗೆ ಬಹಿರಂಗದ ಬದುಕನ್ನು ಹಸನು ಮಾಡುತ್ತಾ ಬಂದಿರುವುದು ನಮಗೆಲ್ಲ ಗೊತ್ತಿರುವ ವಿಚಾರ. ಹೊರಳು, ಬೀಸುವ ಕಲ್ಲು, ಕುಡುಗೋಲಿನಿಂದ ಆರಂಭವಾದ ನಮ್ಮ ವಿಜ್ಞಾನ ಇಂದು ಎಐ (AI) ಮಟ್ಟಕ್ಕೆ ಬಂದು ನಿಂತಿದೆ. ಶಿಕ್ಷಣದ ವ್ಯಾಖ್ಯಾನ ಇಂದು ಬದಲಾಗಿದೆ, ಸಮಸ್ಯೆಗೆ ಪರಿಹಾರ ಕಂಡುಹಿಡಿಯುವುದೇ ಶಿಕ್ಷಣದ ಗುರಿ ಆಗಿದೆ. ಈ ಹೊತ್ತು ನಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವ ವಿಷಯ ಎಂದರೆ, ಅದು ವಿಜ್ಞಾನ.**

■ ಡಾ. ಯು. ಶ್ರೀನಿವಾಸ ಮೂರ್ತಿ

ವಿಜ್ಞಾನ ಎನ್ನುವುದು ಪ್ರಯೋಗಾಲಯ, ರಾಕೆಟ್‌ಗಳು, ದೊಡ್ಡ ದೊಡ್ಡ ಸೂತ್ರಗಳಷ್ಟೇ ಅಲ್ಲ. ಅದು ನಮ್ಮ ದಿನನಿತ್ಯ ಬದುಕಿನ ಚಟುವಟಿಕೆಗಳಲ್ಲಿ ಅಡಗಿದೆ. ನಮ್ಮ ಕುಡಿಯುವ ನೀರು, ಟೀವಿ, ಮೊಬೈಲ್ ಫೋನ್, ಆಹಾರ, ಔಷಧಿ ಹೀಗೆ ಹೆಜ್ಜೆ ಹೆಜ್ಜೆಗೆ ವಿಜ್ಞಾನ ಇದೆ. ಜ್ಞಾನ ನಮಗೆ ಮಾಹಿತಿ ಸಂಗ್ರಹದಿಂದ ಲಭಿಸುತ್ತದೆ. ಆ ಜ್ಞಾನವನ್ನು ಕ್ರಮಬದ್ಧವಾಗಿರಿಸಿದರೆ ಅದನ್ನು ವಿಜ್ಞಾನ ಎಂದು ಕರೆಯುತ್ತೇವೆ. ಅದಕ್ಕಾಗಿ ನಮ್ಮ ಸುತ್ತಮುತ್ತಲಿನ ಪರಿಸರದ ಬಗೆಗಿನ ವ್ಯವಸ್ಥಿತವಾದ (ಕ್ರಮಬದ್ಧವಾದ) ಜ್ಞಾನವೇ ವಿಜ್ಞಾನ ಎನ್ನುವುದು ವಾಡಿಕೆ.

ಪ್ರತಿವರ್ಷ ಫೆಬ್ರವರಿ 28ರಂದು ರಾಷ್ಟ್ರೀಯ ವಿಜ್ಞಾನ ದಿನಾಚರಣೆಯನ್ನು ನಮ್ಮ ದೇಶದಲ್ಲಿ 1987ರಿಂದ ಆಚರಿಸುತ್ತಾ ಬಂದಿದ್ದೇವೆ. ನಮ್ಮ ದೇಶದ ವಿಜ್ಞಾನಿ ಸರ್ ಸಿ.ವಿ. ರಾಮನ್ ಬೆಳಕಿನ ಬಗೆಗಿನ ಸಂಶೋಧನೆಯಲ್ಲಿ ಸಮುದ್ರದ ನೀರು ನೀಲಿಯಾಗಿ ಕಾಣಲು ಕಾರಣವೇನು? ಎಂಬ ವಿಷಯ ಬೆನ್ನು ಹತ್ತಿ ಹೊಸ ವಿಚಾರ



ಸರ್. ಸಿ.ವಿ. ರಾಮನ್